**ಓ.ಎಸ್. ನಂಃ 36/2026**

**ಪಿ ಡಬ್ಲ್ಯೂಃ 2**

**ಸಾಕ್ಷಿಯನ್ನು ದಿಃ 01.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ**: ವಾದಿ ಪರ ವಕೀಲರಾದ ಶ್ರೀ BSS ರವರಿಂದಃ

ಮುಖ್ಯ ವಿಚಾರಣೆ ಬದಲಾಗಿ ನಾನು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಸರಿ ಮತ್ತು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನಾನು ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಈ ಕೆಳಕಂಡಂತೆ ಗುರುತಿಸಿಕೊಳ್ಳುತ್ತಿದ್ದೇನೆ.

| | |
|---|---|
| **ನಿಪಿ–11** | ಮದುವೆಯ ಆಹ್ವಾನ ಪತ್ರಿಕೆ |
| **ನಿಪಿ–12** | ಆಧಾರ ಕಾರ್ಡ |
| **ನಿಪಿ–13** | 10ನೇ ತರಗತಿ ಅಂಕಪಟ್ಟಿ |

**ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಡಿಜಿಪಿರವರಿಂದ ಃ**

ವಿನಾಯಕ ನನ್ನ ಮಗ. ನನ್ನ ಹೆಸರು ತುಳಸಾ. ನನ್ನ ಮದುವೆಯ ನಂತರ ನನ್ನನ್ನು ಸವಿತಾ ಎಂದು ಕರೆಯುತ್ತಾರೆ. ನನ್ನ ಮದುವೆ 2006 ರಲ್ಲಿ ಆಗಿದೆ. ನಿಪಿ 11 ನ್ನು ಈಗ ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಶಾಲೆಯಲ್ಲಿ ನನ್ನ ಹೆಸರನ್ನು ಸವಿತಾ ಎಂದು ನನ್ನ ಅತ್ತೆ ಮಾವ ಬರೆಸಿದ್ದಾರೆ. ಪ್ರತಿವಾದಿಗಳ ತಪ್ಪು ಇಲ್ಲ, ನನ್ನ ಅತ್ತೆ ಮಾವನ ತಪ್ಪು ಇದೆ ಎಂದರೆ ಸರಿ. ಪ್ರತಿವಾದಿಗಳ ತಪ್ಪು ಇಲ್ಲದೇ ಇದ್ದರೂ ಸಹ ಸುಳ್ಳು ಕೇಸು ಹಾಕಿಸಿದ್ದೇನೆ ಎಂದರೆ ಸರಿಯಲ್ಲ.

**ಓ.ಎಸ್. ನಂಃ 36/2026**

**ಪಿ ಡಬ್ಲ್ಯೂಃ 2**

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

**1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**